# ಮೋಹನದಾಸರು ಒಂದು ಚಿಂತನೆ

ಹರಿದಾಸ ಸಾಹಿತ್ಯ ಪ್ರಭೆಯಲ್ಲಿ ಮೋಹನದಾಸರು ವಿಶಿಷ್ಟ ಸ್ಥಾನದಲ್ಲಿದ್ದಾರೆ. ಇವರನ್ನು ಹೆಚ್ಚು ನಂಬಿಕೆಯುಳ್ಳವರು ಮಾಂಡವ್ಯ ಋಷಿಗಳ ಅಂಶ ಎನ್ನುತ್ತಾರೆ. ಅದೇನೆ ಇರಲಿ, ಇವರು ಹರಿದಾಸ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರ. ನಮ್ಮಲ್ಲಿ ಒಂದು ಉಕ್ತಿಯುಂಟು :

ಅದೇನೆಂದರೆ

ಭಕ್ತಿಯಲ್ಲಿ ಭಾಗಣ್ಣ –

"ಯುಕ್ತಿಯಲ್ಲಿ ಮೋಹನ್ನ" –

ಶಕ್ತಿಯಲ್ಲಿ ತಿಮ್ಮಣ್ಣ – ಎನ್ನುವ ನಾಣ್ಣುಡಿ ಇದೆ.

ಭಾಗಣ್ಣ ದಾಸರೆ ಗೋಪಾಲದಾಸರು ಗಣೇಶನ ಅಂಶ ಎನ್ನುತ್ತಾರೆ.

ಮೋಹನ್ನರೇ ಮಾಂಡವ್ಯ ಋಷಿಗಳು ಎನ್ನುತ್ತಾರೆ.

ತಿಮ್ಮಣ್ಣರೇ ವೈಕುಂಠದಾಸರೆಂದು ಪ್ರತೀತಿ ಇದೆ. (ವೇಣುಗೋಪಾಲ ವಿಠಲರು) ಮೋಹನ್ನದಾಸರ ಜೀವನ ಬಹಳ ಕಾಠಿಣ್ಯ. ಅವರ ತಾಯಿ ಬಹಳ ಬಡವಿ. ಮಗು ಸಾಕಲಾರದೆ ನದಿಯಲ್ಲಿ ಬಿದ್ದು ತಾನೂ ತನ್ನ ಜೀವನ ಕಳೆದುಕೊಳ್ಳಬೇಕೆಂದು ತೀರ್ಮಾನಿಸಿ ನದಿಗೆ ಬೀಳಲು ಹೋದಾಗ ಆ ಕಾಲಕ್ಕೆ ಬಂದು ಒದಗಿದವರು ಶ್ರೀ ವಿಜಯದಾಸರು.

ವಿಜಯದಾಸರು : ಅಮ್ಮ ಏನು ರೋಧನ ? ಏನಾಗಿದೆ ? ಹೇಳು.

ಆಕೆ (ತಾಯಿ) : ಸ್ವಾಮಿ ಏನು ಹೇಳಲಿ, ನನ್ನ ಕಷ್ಟ ಭಗವಂತನಿಗೂ ಬೇಡದ ಈ ಜೀವಿಗಳು ಸಾಕಲಾರದೆ ನೀರಿನಲ್ಲಿ (ಚಕ್ರತೀರ್ಥದಲ್ಲಿ) ಎಸೆದು ನಾನೂ ಜೀವನ ಕಳೆದುಕೊಳ್ಳಲು ನದಿಗೆ

ಹೋಗುತ್ತಿದ್ದೇನೆ.

ವಿ.ಪ್ರಭು : ತಾಯಿ ಹಾಗೆ ಮಾಡಬೇಡ. ಯೋಚಿಸಬೇಡ ಆ ಮಗುವನ್ನು ನನಗೆ ಕೊಡು ಎಂದರು.

ಆಕೆ: ಸ್ವಾಮಿ ಖಂಡಿತ ಬೇಡ. ತಂದೆ ಇಲ್ಲದ ತಬ್ಬಲಿ. ಸಾಲದ್ದಕ್ಕೆ ಬಡತನ. ಹಾಲಿಗೆ ಹಣವಿಲ್ಲ. ಅಲ್ಲದೆ, ಮೈಯೆಲ್ಲಾ ದುರ್ವಾಸನೆ, ಕಜ್ಜಿ ರೋಗ ಯಾರಿಗೂ ಬೇಡ ಈ ಕೂಸು, ಹಾಗೂ ಈ ನನ್ನ ಮಗು ನಿಮಗ್ಯಾಕೆ. ಬೇಡ ಸ್ವಾಮಿ ದಯಮಾಡಿ ನನ್ನನ್ನು ನೀರಿನಲ್ಲಿ ಬೀಳಲು ದಾರಿ ಕೊಡಿ.

ವಿಜಯದಾಸರು : ತಾಯಿ, ಹಾಗೆ ಮಾಡಬೇಡ. ನೀನು ಹೇಗಾದರೂ ಜಿವಿಸು. ಪರವಾಗಿಲ್ಲ. ಆ ಕೂಸನ್ನು ನನಗೆ ಕೊಡು ಎಂದರು.

ಆಕೆ: ಹರಿಚಿತ್ತ "ಬದುಕಿ ಬಾಳು" ಎಂದು ಆ ಕೂಸನ್ನು ವಿಜಯದಾಸರ ಕೈಗೆ ಇತ್ತಳು.

ವಿಜಯಪ್ರಭುಗಳು: ಆ ಕೂಸನ್ನು ಕೈಗೆತ್ತಿಕೊಂದು ಅದೇ ನದಿಗೆ ಹೋಗಿ ಸ್ನಾನ ಮಾಡಿಸಿದರೆ ವ್ರಣ ರೋಗವೆಲ್ಲಾ ಮಾಯ. ಮಗು ಕಿಲಕಿಲ ನಕ್ಕಿದ್ದು ಕಂಡರು. ಮನೆಗೆ ಹೋಗಿ ಆ ಮಗುವನ್ನು ಹೆಂಡತಿ ಕೂಸಮ್ಮನ ಕೈಗೆ ಕೊಟ್ಟು ಇವತ್ತಿನಿಂದ ಈ ಕೂಸು ನಿನ್ನ ಕೂಸೆಂದು ಚೆನ್ನಾಗಿ ಸಾಕು ಎಂದು ಮೋಹನ ಎಂದೇ ನಾಮಕರಣ ಮಾಡಿದರು. ಸಾಕು ಮಗನಾಗಿ ಬೆಳೆಯುತ್ತಿದ್ದಾನೆ.

ಕೂಸು ಬೆಳೆಯಿತು. ತಕ್ಕಮಟ್ಟಿಗೆ ವಿದ್ಯಾಭ್ಯಾಸ, ಆಟಪಾತಗಳೆಲ್ಲಾ ಮುಂದುವರೆದು ಚೌಲ–ಮುಂಜಿ ಸಂಸ್ಕಾರ ನಡೆಯಿತು. ಬೆಳೆದು ದೊಡ್ಡವನಾದ ಮೋಹನ್ನ ಬಹುಶಃ ೨೦/೨೧ರ ಹರೆ ಮುಟ್ಟಿರಬಹುದು. ಸುಮಾರು ೧೧/೧೨ ವರುಷದ ಸೀತಮ್ಮ ಎಂಬ ಕನ್ಯೆಯನ್ನು ತಂದು ಲಗ್ನ ಕಾರ್ಯ ಕೂಡ ನಡೆದುಹೋಯಿತು. ಸುಮಾರು ೩–೪ ತಿಂಗಳು ಕಳೆದಿರಬಹುದು. ವಿಜಯಪ್ರಭುಗಳು ಸಂಚಾರಕ್ಕೆ ಹೊರಟರು. ಹೊರಡುವಾಗ ಸೊಸೆ ಸೀತಮ್ಮನನ್ನು

ಕರೆದು ಅಮ್ಮಾ - ನಾನು ಈಗ್ಗೆ ಸಂಚಾರ ಹೋಗುತ್ತಿದ್ದೇನೆ. ನಿನ್ನ ಗಂಡನನ್ನು ಚೆನ್ನಾಗಿ ನೋಡಿಕೋ. ಆಕಸ್ಮಾತ್ ವಿಧಿ ಅವನನ್ನು ಕರೆದುಕೊಂಡು ಹೋದರೆ ತಕ್ಷಣ ದೇಹವನ್ನು ಅಗ್ನಿ ಸ್ಪರ್ಶಿಸದೆ ನನ್ನನ್ನು ಸ್ಮರಣೆ ಮಾಡು ಎಂದು ಆದೇಶಿಸಿದರು. ಕಾಲ ಉರುಳಿತು. ಒಂದು ದಿನ ಮೋಹನ ತೀರಿ ಹೋದ. ಎಲ್ಲಾರೂ ದುಃಖತಪ್ತರಾದರು. ತಕ್ಷಣ ವಿಜಯದಾಸರನ್ನು ನೆನೆದರು. ದೇಹವನ್ನು ಅಗ್ನಿಸ್ಪರ್ಶಕ್ಕೆ ಬಿಡಲಿಲ್ಲ. ಕಾದು ಕಾದು ಕಾಯುತ್ತಿದ್ದಳು.

ಈಕೆ ಕೂಗು ವಿಜಯದಾಸರಿಗೆ ಕೇಳಿಸಿತು. ತಕ್ಷಣ ಅವರು ಸಂಚಾರದಲ್ಲಿದ್ದ ಸ್ಥಳದಿಂದ ಜಪಕ್ಕೆ ಅಂತರ್ಮುಖಿಯಾಗಿ ಕುಳಿತರು. ಶಿಷ್ಯರಿಗೆ ಹೇಳಿ ಕುಳಿತರು. ನಾವು ಈಗ ಧ್ಯಾನಸಕ್ತರಾಗುತ್ತೇವೆ. ಬಹಿರ್ಮುಖವಾಗುವ ತನಕ ಚಿಂತಿಸಬೇಡಿ ಎಂದು ಸೂಚಿಸಿದ್ದರು. "ವಿಜಯಪ್ರಭುಗಳು ನೇರ ಯಮನ ಲೋಕಕ್ಕೆ ತೆರಳಿದರು. ಯಮರಾಜ ಓಡಿ ಬಂದು ನಮಸ್ಕರಿಸಿ ಸ್ವಾಮಿ ಏನಾಗಬೇಕು. ನನ್ನಿಂದ ಏನು ಅಪರಾಧವಾಗಿದೆ" ಎಂದನು.

ವಿಜಯದಾಸರು ನನ್ನ ಸಾಕು ಮಗ ಮೋಹನನನ್ನು ಏಕೆ ಕರೆತಂದಿರಿ? ವಿಮರ್ಶೆಯಾಗಲಿ ಎಂದಾಗ ತಕ್ಷಣ ಈ ವಿಚಾರವನ್ನು ಚಿತಗುಪ್ತರಲ್ಲಿ ಪ್ರಸ್ತಾಪಿಸಲು, ಮೋಹನ ಎಂಬ ಹಸುವನ್ನು ತರಬೇಕಿದ್ದು ಬದಲಾಗಿ ಸಾಕು ಮಗ ಮೋಹನನನ್ನು ತಂದಿರುವ ವಿಚಾರ ತಿಳಿಯಿತು. ತಕ್ಕ ಏರ್ಪಾಡು ಮಾಡುವೆ ಎಂದು ತಿಳಿಸಿದ ಯಮರಾಜ. ಅಲ್ಲಿಂದ ನೇರ ವಿಜಯದಾಸರು ಊರಿಗೆ ಮರಳಿ ಬಂದರು. ಊರಿನ ಜನ ಶೋಕತಪ್ತರಾಗಿದ್ದರು. ತಾವು ಸೊಸೆಯನ್ನು ಸಾಂತ್ವನ ಮಾಡುತ್ತಿರುವಂತೆಯೇ ಮೋಹನನು ಎದ್ದು ಕುಳಿತ. ಎಲ್ಲರೂ ಸಂತೋಷಪಟ್ಟರು.

ಕಾಲ ಉರುಳಿತು. ಆ ಸಾಕುಮಗನಿಗೆ 'ಮೋಹನವಿಠಲ' ಎಂದು ಅಂಕಿತೋಪದೇಶವನ್ನು ನೀಡಿ ಹರಿದಾಸ ಕೂಟಕ್ಕೆ ಸೇರ್ಪಡೆ ಮಾಡಿದರು.

ಅಂಕಿತವನ್ನು ಪಡೆದ ಮೋಹನನು ಸಾಕು ತಂದೆಯಾದ ವಿಜಯಪ್ರಭುಗಳಿಗೆ ಸಾಷ್ಟಾಂಗ ನಮಸ್ಕರಿಸಿದರು.

ವಿಜಯದಾಸರು ಚಿರಂಜೀವಿಯಾಗಿರೋ ಚಿನ್ನ ನೀನು

ಪರಮಭಾಗವತರ ಧೂಳಾಗಿ .............

ಎಂದು ಒಂದು ಕೃತಿಯನ್ನು ರಚಿಸಿ ಉಪದೇಶಿಸಿದರು.

ಈ ಕಾಲದಲ್ಲೇ ಅಕ್ಕಪಕ್ಕದಲ್ಲಿದ್ದ ಮೋಹನ ಎಂಬ ಹಸು ಅಸುನೀಗಿತು. ಈ ಹಸುವಿನ ಮಾಲೀಕರು ದುಃಖಿತಪ್ತರಾದರು ಎಂಬ ವದಂತಿ ಕೂಡ ಇದೆ.

ಪುನರ್ಜನ್ಮ ಬಂದಂತಹ ಮೋಹನರಿಗೆ ದೈವಭಕ್ತಿ ಅಪಾರವಾಯಿತು. ಸಾರಸ್ವತ ಲೋಕಕ್ಕೆ ಅಪಾರ ಸಾಹಿತ್ಯವನ್ನು ಕೊಟ್ಟಿದ್ದಾರೆ. ಉಗಾಭೋಗ, ದೇವರನಾಮಗಳು, ಖಂಡಕಾವ್ಯಗಳಾದ ಕೋಲು ಹಾಡು, ಸೀತಾಕಲ್ಯಾಣ ಹೀಗೆ ಅನೇಕ ಗ್ರಂಥಗಳನ್ನು ಸರಸ್ವತಿಯ ಮುಡಿಗೆ ಏರಿಸಿದ್ದಾರೆ.

ಇವರ ಜೀವನದಲ್ಲಿ ಪ್ರಮುಖವಾಗಿ ತಿಳಿಯಬೇಕಾದದ್ದು ವಿಜಯದಾಸರು ಸಾಕುಮಗನಿಗೋಸ್ಕರ ಯಮಪಟ್ಟಣಕ್ಕೆ ಹೋಗಿ ಬದುಕಿಸಿ ಬಂದದ್ದು. ಏಕೆಂದರೆ ಸ್ವರ್ಗ-ನರಕ, ಪಾಪ-ಪುಣ್ಯದ ಬಗ್ಗೆ ನಂಬಿಕೆ ಇಲ್ಲದ ಇಂದಿನ ಜನರಲ್ಲಿ ಈ ಘಟನೆ ನಿಜಕ್ಕೂ ಐತಿಹ್ಯವಾಗಿದೆ.

ಊರಿನ ಜನ ಇಂತಹ ದೊಡ್ಡವರ ಮನೆಯಲ್ಲಿ ಬಹುಕಾಲ ಮೃತದೇಹ ಇಡುವುದು ಸೂಕ್ತವಲ್ಲ ಎಂದು ಸಂಸ್ಕಾರಕ್ಕೆ ಅವರ ಹೆಂಡತಿಯನ್ನು ಕೇಳಿದರು. ಆಗ ಆಕೆ ಒಪ್ಪಲಿಲ್ಲ. ಮಾನವರಾದ ವಿಜಯದಾಸರನ್ನು ಸ್ಮರಣೆ ಮಾಡುತ್ತಿದ್ದಂತೆ ಆತ ಎದ್ದು ಕೂತರು. ಅವರ ಬಾಯಿಂದ ಬಂದದ್ದು ಪದ ಹೀಗಿದೆ.

ತಂದೆ ವಿಜಯರಾಯವ್ಯಾಳಿಗೆ

ಬಂದ್ಯೋ ವಿಜಯರಾಯ ॥ ಪ ॥

ಹಿಂದೇಸು ಜನ್ಮವು ಮುಂದೇಸು ಜನ್ಮವು
ಒಂದು ತಿಳಿಯದೆಂದೆಂದಿಗೂ ಎನ್ನಯ ॥ ಅ.ಪ.॥

ಸೂರ್ಯನ ಸುತನಂತೆ ಅಲ್ಲಿ ಮಹ
ಶೂರ್ಯದೂತರಂತೆ
ಕಾರ್ಯ ಕಾರ್ಯವು ತಿಳಿಯದೆ ನಿನ್ನ ಪರಿ
ಚಾರ್ಯನ ಎಳಿತರೆ ಭಾರ್ಯೆಳು ಮೊರೆಯಿಡೆ ॥ ೧ ॥

ಅದೇ ಧೈರ್ಯ ನೋಡಿ ಸುದತಿ ತಾ
ಹೃದಯ ಬದ್ಧ ಮಾಡಿ
ಮಧುಸೂದನನೆ ಮೋದತೀರ್ಥರೇ
ದೊದರಿದಳೂದಾರಿಗೆಳ್ ವಿಜಯರಾಯರೆಂದು ॥ ೨ ॥

ಕರಗಳನೇ ಕಟ್ಟಿ ಎಳೆಯುತಿರೆ
ದೊರೆಗಳನೇ ಮುಟ್ಟಿ
ಸಿರಿಮೋಹನ್ನವಿಠಲನ ಪದವ ತೋರಿ
ಧರೆಗೆ ತಂದುಬಿಟ್ಟೆ ಕರುಣಾಳುವೆ ಎನ್ನ ॥ ೩ ॥

ಮೋಹನದಾಸರು ದೇಹಬಿಟ್ಟ ನಂತರ ಸೂರ್ಯನ ಮಕ್ಕಳಾದ ಯಮಧರ್ಮರಾಯನ ಭಟರಿಂದ ಕರೆದೊಯ್ದು ಯಮನೆದುರು ನಿಲ್ಲಿಸುತ್ತಾರೆ. ಆ ವೇಳೆಗೆ ಸರಿಯಾಗಿ ರಾಮೇಶ್ವರದಲ್ಲಿದ್ದ ವಿಜಯದಾಸರಿಗೆ ಈ ವಿಷಯ ತಿಳಿದು ತಾವು ಜಪಕ್ಕೆ ಕುಳಿತು ಅಣಿಮಾ ಸಿದ್ಧಯುತರಾದ ಇವರು ನೇರ ಯಮನಪುರಕ್ಕೆ ಹೋಗಿದ್ದಾರೆ. ಯಮ, ವಿಜಯಪ್ರಭುಗಳನ್ನು ನೋಡಿದ ತಕ್ಷಣ ದಾಸರಿಗೆ ಸ್ವಾಗತ ನೀಡಿ ತಾವು ಬಂದುದರ ಕಾರಣ ಕೇಳುತ್ತಾನೆ. ತಾವು ಎಲ್ಲಿಂದ ಬಂದಿರಿ?

ವಿ.ಪ್ರಭುಗಳು: ನಾವು ರಾಮೇಶ್ವರದಿಂದ

ಯಮ : ಅಲ್ಲಿದ್ದ ನಿಮಗೆ ಈ ವೃತ್ತಾಂತ ಹೇಗೆ ತಿಳಿಯಿತು?

ವಿ.ಪ್ರಭುಗಳು: ಹೇ ರಾಜನ್, ನನ್ನ ಮಗ ಶೇಷಗಿರಿಗೆ ಅಪಮೃತ್ಯು ಬಂದಿತ್ತು. ಅಪಮೃತ್ಯುವಿದೆ ಎಂದು ಶ್ರೀಹರಿ ತಿಳಿಸಿದ್ದ. ಆ ದಿನಕ್ಕೆ ಕಾದಿದ್ದೆ ಅಂದರು ... ನಿರೀಕ್ಷಿಸುತ್ತಿದ್ದಂತೆ ಪ್ರಾಪ್ತವಾಗಿದೆ. ನಾನು ಸಂಚಾರ ಹೊರಟಾಗ ನನ್ನ ಸೊಸೆಗೆ ಅಪಮೃತ್ಯು ಬಂದರೂ ಎದೆಗುಂದಬೇಡ, "ದೀರ್ಘ ಸುಮಂಗಲೀ ಭವ" ಎಂದು ಆಶೀರ್ವಾದ ಮಾಡಿ ಬಂದಿದ್ದೇನೆ ಎಂದರು. ಅಲ್ಲೇ ಇದ್ದ ಮೋಹನಜೀವಿ ಈ ವಾಗ್ವಾದ ಕೇಳಿ ತೃಪ್ತನಾಗಿದ್ದ. ಅವನ ಪೂರ್ಣಾಯು ಮಿತಿಮೀರಿಲ್ಲ! ನಿಮ್ಮ ಭಟರು ಕಾರಣ ತಿಳಿಸಬೇಕೆಂದರು.

ಯಮಧರ್ಮರಾಯ ಭಟರ ಕಡೆ ದೃಷ್ಟಿಸಿ ನೋಡಿದ. ದಾಸರಿಗೆ ಉತ್ತರಿಸಿ ಎಂದರು.

ತಕ್ಷಣ ನೋಡಲು, ಮೋನಪ್ಪ ಎಂದು ಸಂಬೋಧನೆ ಹಳ್ಳಿಯ ಕಡೆ ಮಾಡುತ್ತಿದ್ದ ಕಾರಣ ಇವರನ್ನು ನಮ್ಮ ಗಮನ ಇವರತ್ತವೇ ಸಾಗಿತು, ಕ್ಷಮೆ ಮಾಡಿರೆಂದರು. (ಎರಡು ರೀತಿ ವಿಚಾರ ನಾವು ಕೇಳಿದ್ದೆವು. ಅದನ್ನೇ ದಾಖಲಿಸಿದ್ದೇವೆ)

ತಕ್ಷಣ ಯಮಭಟರನ್ನು ಅವರನ್ನ ಗೌರವವಾಗಿ ಅವರ ಮನೆಗೆ ಬಿಟ್ಟುಬನ್ನಿರೆಂದು ಆಜ್ಞೆ ಮಾಡಿದ. ಐತಿಹ್ಯದಿಂದ ಮತ್ತೆ ಮೋಹನದಾಸರಿಗೆ ಪುನರ್ಜನ್ಮ ಪ್ರಾಪ್ತವಾಗಿ ಎದ್ದು ಕುಳಿತರು. ತಕ್ಷಣ ತಮ್ಮ ಗುರುಗಳು – ತಂದೆಯೂ ಆದ ವಿಜಯ ಪ್ರಭುಗಳನ್ನು ಸ್ತೋತ್ರ ಮಾಡಿದರು. (ಎರಡು ರೀತಿಯ ಚಿಂತನೆ ಇದೆ. ಬಾಧಕವಿಲ್ಲ ಸ್ವೀಕರಿಸಬಹುದು).

*************************

ವಿಜಯದಾಸರು ಮೋಹನದಾಸರಿಗೆ ಕೊಟ್ಟ ಅಂಕಿತಪದ :–

ಪಾಹಿಮೋಹನವಿಠಲ ಪರಮ ಕರುಣಾಜಲಧಿ
ಮಹದಾದಿ ದೇವವಂದ್ಯ ॥ ಪ ॥
ಮೋಹ ಪಾಶವ ಬಿಡಿಸಿ ನಂಬಿದವನಿಗೆ ಒಲಿದು
ರಹಸ್ಯ ಮತಿ ಕೊಡುವುದು ಸ್ವಾಮಿ ॥ ಅ.ಪ. ॥

ನೀನಿತ್ತ ಮಾತುಗಳು ಪೊಳ್ಳಾಗಬಲ್ಲವೆ ಅನಂತ ಜನುಮವಾಗೆ
ಆಗೊಬ್ಬನೆನ್ನದಿರು ಕೀರ್ತಿಸುವ ನರನೆಂದು
ಜ್ಞಾನಿಗಳಿಗರಿವಾಗಿದೆ
ಏನಯ್ಯ ನಿನ್ನಂಘ್ರಿ ಭಜಿಸದಲೆ ಇರುತಿಪ್ಪ ಮಾನವನ
ಕ್ಲೇಶಕೆಣೆಯೆ
ಆನಂದನಂದನನೆ ತೃಣವ ಪಿಡಿದು ರತುನವನು ಮಾಡಿ
ತೋರುವ ಸ್ವಾಮಿ ॥ ೧ ॥

ನಿನ್ನಧೀನ ಕರ್ಮ ಸ್ವಭಾವ ಮೊದಲಾಗಿ ಅನ್ಯಥಾಯಲ್ಲಿ ಕಾಣೆ
ಮನ್ನಿಪುದು ಮುದದಿಂದ ಮಂದನೆನ್ನದೆ ಎನ್ನ ಬಿನ್ನಪವ
ಬರಿದೆನಿಸದೆ
ಅನ್ಯನಿವನಲ್ಲವೋ ಎನ್ನನ್ನೆ ಪೊಂದಿದ ನಿನ್ನ ದಾಸನ ದಾಸನು
ಉನ್ನಂತ ಗುಣವಿತ್ತು ಉರುಕಾಲ ಒಲಿದು ಪ್ರಸನ್ನನಾಗೋ
ಪಾವನ್ನರನ್ನ ॥ ೨ ॥

ನರರಿಗೆ ಸಾಧನೆ ಸಂಕೀರ್ತನೆ ಎಂದು ಪರಮೇಷ್ಠಿ
ಬರೆದನಿದಕೊ
ಪರಿಪರಿ ಬಗೆಯಿಂದ ಕರ್ಮಗಳ ಮಾಡಿದರೆ ದುರಿತ
ಬೆವ್ಮೊಗವಾಗವು
ಪಿರಿದಾಗಿ ಬೇಡಿದೆನೊ ವಿಜಯವಿಠಲ ನಿನ್ನ ಶರಣರೊಳಗಿಟ್ಟು
ಕಾಪಾಡು

ಸ್ಥಿರವಾಗಿ ಅಂಕಿತವ ಪ್ರೇರಿಸಿಕೊಡಿಸಿದ್ದು ಧರೆಯೊಳಗೆ
ಪರಿಪೂರ್ಣವಾಗಿರಲಿ ಸ್ವಾಮಿ ॥ ೩ ॥
*******************

ಶ್ರೀ ಮೋಹನದಾಸರಿಗೆ ಆಶೀರ್ವಾದ ಪದ :-
ಚಿರಂಜೀವಿಯಾಗೆಲೋ ಚಿನ್ನ ನೀನು
ಪರಮಭಾಗವತರ ಪದಧೂಳಿ ಧರಿಸುತಲಿ ॥ ಪ ॥

ಜರಿಯಬ್ಯಾಡ ಹರಿಯ ಮರೆಯಬ್ಯಾಡೆಂದೆಂದು
ತಿರಿಯಬ್ಯಾಡ ಖಳರ ಮನೆಗೆ ಪೋಗಿ
ಬರೆಯಬ್ಯಾಡನ್ಯರಿಗೆ ತತ್ವಗಳ ರಹಸ್ಯ
ಬೆರೆಯಬ್ಯಾಡ ಅನ್ಯ ಸತಿಯ ಸ್ವಪ್ನದಲೂ ॥ ೧ ॥

ಸಾಲಮಾಡಲಿ ಬ್ಯಾಡ ಸಾಲದೆನ್ನಲಿ ಬ್ಯಾಡ
ನಾಳಿಗೆ ಹ್ಯಾಂಗೆಂಬೊ ಚಿಂತೆಬ್ಯಾಡ
ಖೂಳ ಜನರೊಡನಾಡಿ ಕಂಗೆಡಲು ಬೇಡ ನೀ
ಬಾಳುವರ ಸಂಗಡ ಬಾಳೆಲವೊ ಬಾಳ ॥ ೨ ॥

ಲೋಕವಾರ್ತೆಯು ನಿನ್ನ ಕಿವಿಗೆ ಕೇಳಿಸಬ್ಯಾಡ
ಶ್ರೀಕಾಂತನೇಕ ಕೀರ್ತಿಯ ಕೇಳದಿರಬೇಡ
ಪಾಕವನು ಮಾಡಿ ಏಕಾಂತದಲಿ ಉಣಬ್ಯಾಡ
ಭೂಕಾಂತರನುಸರಿಸಿ ಬೆಸದೊಳಲು ಬೇಡ ॥ ೩ ॥

ಪಂಡಿತರು ಪಾಮರರು ಆರಾದರೂ ನಿನ್ನ
ಕಂಡವರಿಗೆಲ್ಲಿ ಕೌತುಕ ತೋರಲಿ
ಹೆಂಡರು ಮಕ್ಕಳು ಅಳಿಯ ಸೊಸೆ ಮೊಮ್ಮಕ್ಕಳು

ಉಂಡುಟ್ಟು ದ್ವಿಜರ ಸಹ ಗಂಡುಗಲಿಯಾಗಿರೆಲೊ ॥ ೪ ॥

ಮಂದಮತಿಗಳ ಕೂಡ ಮಾತನಾಡದಿರು ಹರಿ
ನಿಂದಕರ ಕಣ್ಣೆತ್ತಿ ನೋಡಬ್ಯಾಡ
ಇಂದಿರೆಯರಸ ನಮ್ಮ ವಿಜಯವಿಠಲನಪಾದ
ದ್ವಂದ್ವ ಮಸ್ತಕತನಕ ನೋಡದಿರಬೇಡ ॥ ೫ ॥

ಈ ರೀತಿ ೨ ಪದಗಳನ್ನು ರಚಿಸಿ ಶ್ರೀ ಮೋಹನ್ನದಾಸರಿಗೆ ಅಂಕಿತ ಪ್ರದಾನ ಮಾಡಿ ಶ್ರೀ ವ್ಯಾಸರಾಜರ ಬೃಂದಾವನ ಸನ್ನಿಧಿಯಾದ ಆನೆಗೊಂದಿಯಲ್ಲಿ ಇತ್ತರೆಂದು ಪ್ರತೀತಿ. (ನವಬೃಂದಾವನ ಸನ್ನಿಧಿಯಲ್ಲಿ).
*********************************

ಮೋಹನದಾಸರು ಮಾಂಡವ್ಯ ಋಷಿಗಳೆಂದು ಪ್ರತೀತಿ ಬಗ್ಗೆ ಎರಡು ಮಾತು

ಮಾಂಡವ್ಯ ಋಷಿಗಳು ಬೆಂಗಳೂರು ಗ್ರಾಮಾಂತರ ಸಮೀಪ ಮಾಗಡಿಯಲ್ಲಿರುವ ಬೆಳೆಯೋ ರಂಗನನ್ನು ಬಹು ವರ್ಷಗಳ ಕಾಲ ತಪಸ್ಸು ಮಾಡಿದರು. ಭಗವಂತ ಶ್ರೀನಿವಾಸ ಪ್ರತ್ಯಕ್ಷನಾದ. ಸಾಲಿಗ್ರಾಮ ರೂಪದಲ್ಲಿ ನೋಡಿ ಆನಂದಪಟ್ಟರು. ಅದನ್ನು ಅಲ್ಲೇ ಪ್ರತಿಷ್ಠಾಪಿಸಿ ಅಂದರೆ ಬೆಳೆಯುತ್ತಿರುವ ರಂಗನಾಥ ಪೂರ್ವಮುಖವಾಗಿದ್ದಾನೆ. ಆ ಪ್ರತೀಕದ ಹಿಂದುಗಡೆ ಬೆನ್ನ ಹಿಂದೆ ಆ ಸಾಲಿಗ್ರಾಮ ರೂಪದಲ್ಲಿರುವ ಶ್ರೀಹರಿಯನ್ನು ಕಾಲಾಂತರದಲ್ಲಿ ಅದು ಶ್ರೀನಿವಾಸ ಎಂದು ಜನರಿಗೆ ತಿಳಿಯುವುದು ಕಷ್ಟಕರ ಎಂದು ಯೋಚಿಸಿ, ತಾವೇ ಒಂದು ಶ್ರೀನಿವಾಸ ವಿಗ್ರಹವನ್ನು ನಿರ್ಮಾಣ ಮಾಡಿ ಅಲ್ಲಿಯೇ ಪ್ರತಿಷ್ಠಾಪಿಸಿ ಬಹುಕಾಲ ಉಪಾಸನೆ ಮಾಡಿಕೊಂಡಿದ್ದರು. ಅದೇ ಈಗಿನ ಪಶ್ಚಿಮ ರಂಗನಾಥ ತಿರುಮಲ

ಕ್ಷೇತ್ರ ಮಾಗಡಿಯಲ್ಲಿದೆ. ತಕ್ಷಣ ಸಂದರ್ಶಿಸಬಹುದು. ಬೆಂಗಳೂರಿನಿಂದ ೪೫ ಕಿ.ಮೀ. ದೂರದಲ್ಲಿದೆ.

ನಂತರ ಮಾಂಡವ್ಯರು ಬೆಂಗಳೂರಿಗೆ ಧಾವಿಸಿದರೆಂದು ಪ್ರತೀತಿ. ಅಲ್ಲಿನ ವಸಂತವಲ್ಲಭರಾಯ ಎಂಬ ಹೆಸರಿನಿಂದ ೨ನೇ ವಿಗ್ರಹವನ್ನು ಸುಬ್ರಹ್ಮಣ್ಯಪುರದಲ್ಲಿ ಪ್ರತಿಷ್ಠಾಪಿಸಿದ್ದಾರೆಂದು ಐತಿಹ್ಯ. ಮತ್ತೆ ತಮ್ಮ ಪ್ರಯಾಣವನ್ನು ಮುಂದುವರೆಸಿದ ಮಾಂಡವ್ಯರು ಮಂಡ್ಯಕ್ಕೆ ಪ್ರಯಾಣಿಸಿ ಅಲ್ಲಿ ಒಂದು ಶ್ರೀನಿವಾಸನನ್ನು "ಲಕ್ಷ್ಮೀಜನಾರ್ದನ" ಎಂಬ ಹೆಸರಿನಿಂದ ಪ್ರತಿಷ್ಠಾಪಿಸಿದ್ದಾರೆಂದು ಪ್ರತೀತಿ. ಹೀಗಾಗಿ ಮಾಂಡವ್ಯರು ಅಲ್ಲಿ ಪ್ರತಿಷ್ಠಾಪಿಸಿದ್ದರಿಂದ ಮಂಡ್ಯ ಎಂಬ ಹೆಸರು ಆ ಪ್ರದೇಶಕ್ಕೆ ಬಂದಿದೆ ಎಂದು ನಾವು ಪುರಾಣದಲ್ಲಿ ಕೇಳಲ್ಪಟ್ಟ ವಿಚಾರ. ನಂತರ ಮಾಂಡವ್ಯರು ಬಿಳಿಗಿರಿ ರಂಗನಾಥನ ದರ್ಶನಕ್ಕೆ ಪ್ರಯಾಣ ಬೆಳೆಸಿದರೆಂದು ಪ್ರತೀತಿ. ಈ ರೀತಿ ನಮಗೆ ತಿಳಿದಂತೆ ೩ ಪ್ರತಿಮೆಗಳನ್ನು ಬೇರೆ ಬೇರೆ ಸ್ಥಳದಲ್ಲಿ ಪ್ರತಿಷ್ಠಾಪಿಸಿದ್ದಾರೆಂದು ಪ್ರತೀತಿ. ತಿಳಿಯದೆ ಇನ್ನೆಷ್ಟು ಪ್ರತಿಷ್ಠಾಪಿಸಿದ್ದಾರೋ ಹುಡುಕಬೇಕಾಗಿದೆ.

ಮೋಹನದಾಸರು ಸಾರಸ್ವತ ಲೋಕಕ್ಕೆ ಕೊಟ್ಟ ಕೃತಿ ಅತ್ಯಲ್ಪ.

೧. ಅದರಲ್ಲಿ ಕೃತಿಗಳು (ಪದಗಳು/ದೇವರನಾಮಗಳು) ಸುಮಾರು – ೫೬

೨. ಸುಳಾದಿ – ೩

೩. ಉಗಾಭೋಗ – ೨

೪. ಕೋಲುಪದ ದೀರ್ಘ ಕೃತಿ ೨೧೭ ನುಡಿ ಇದೆ.

ವಿಜಯದಾಸರು ಈ ಮಗುವನ್ನು ಕಂಡಾಗ ದುರ್ಗಂಧ ನಾರುವ ಬೇನೆಯಿಂದ ಬಳಲುತ್ತಿರುವ ಅಸಹ್ಯ ಮಗುವನ್ನು ತಾವು ಆಕೆಯಿಂದ ಸ್ವೀಕರಿಸಿ, ಶ್ರೀಹರಿಯಲ್ಲಿ ಪ್ರಾರ್ಥಿಸಿ,

ಇವನ ಪಾಲಿಸಿದರೆ ನಿನಗೆ ಪುಣ್ಯ
ಅವನಿಯೊಳಗೆಂದೆಂದಿಗೂ ತಾನೇ ಧನ್ಯ ॥ ಪ ॥

ನೆಟ್ಟ ಮುಳ್ಳು ಕಿತ್ತು ಬಿಟ್ಟಂತೆ ಮಾಡೊ
ಘಟ್ಯಾಗ ಭಕುತನ್ನ ಕಾಪಾಡೊ ॥ ೧ ॥
ಸಾಧನ ಪ್ರಾಣಿಗಳಿರಬೇಕೋ
ಆದರದಿಂದ ಕೇಳೆನ್ನವಾಕು ॥ ೨ ॥
ಭಜಿಪರ ಭಾಗ್ಯೋದಯ ನಿಧಿಯೆ
ವಿಜಯವಿಠಲ ಕೇಳೆನ್ನ ದೊರೆಯೆ ॥ ೩ ॥

ಎಂದು ಪ್ರಾರ್ಥಿಸಿ ಆ ಕಂದನನ್ನು ತನ್ನ ಕಂದ ಎಂದು ಸ್ವೀಕರಿಸಿ ಹೆಂಡತಿಗೆ ಕೊಟ್ಟ ಆ ೨ ವರುಷದ ಕೂಸು ದಾಸರ ಮನೆ ಸೇರಿದ್ದರಿಂದ ಆ ಚೀಕಲಪರ್ವಿಯೇ ಆತನ ನೆಲೆಯಾಯಿತು ಅಂದರೆ ತಪ್ಪೆ?

ವಿಜಯನಗರ ಸಾಮ್ರಾಜ್ಯದಲ್ಲಿ ಆನೆಗೊಂದಿಯಲ್ಲಿ ಭೀಮಪ್ಪ ಎಂಬ ನಾಯಕ ಶ್ರೀಮಂತ ಚಿನಿವಾರನಿದ್ದನು. ಇವರ ಪತ್ನಿ ಗರ್ಭಿಣಿಯಾಗಿದ್ದಾಗ ಅಕಾಲಮೃತ್ಯುವಿಗೆ ಈಡಾಗಿ, ಆಕೆ ಸಂಬಂಧದಲ್ಲಿ ಮತ್ಸರ (ವಿಧವೆಯಾದ್ದರಿಂದ)ಕ್ಕೆ ಗುರಿಯಾಗಿ ಆಸ್ತಿಪಾಸ್ತಿ ಕಳೆದುಕೊಂಡು ಅನಾಥೆ ಆಗಿ, ಮಾನಕ್ಕೆ ಹೆದರಿ ಬಹುಶಃ ಆ ಊರನ್ನು ಬಿಟ್ಟು ಹಂಪೆಗೆ ಬಂದಿರಬಹುದು. ಆ ಕಾಲದಲ್ಲಿ ಮಗು ರೋಗಿಷ್ಠವಾಯಿತು. ಆರೈಕೆ ಇಲ್ಲದೆ ಪ್ರಾಣ ಕಳೆದುಕೊಳ್ಳುವುದೇ ಸೂಕ್ತ ಎಂದುಕೊಂಡಾಗ ಊರುಗೋಲಿನ ಆಶ್ರಯವಾಗಿ ವಿಜಯರಾಯರು ಸಿಕ್ಕ ಆ ಮಗುವನ್ನು ಬದುಕುವಂತೆ ಮಾಡಿದರು. ಆ ಕೂಸೇ ಮೋಹನ.

ಕೋಲುಹಾಡು ಬರೆದಿರುವ ಮೋಹನದಾಸರ ಕೃತಿಗೆ ಅವರ ಶಿಷ್ಯರಾದ ಲಕ್ಷ್ಮಣದಾಸರು ಫಲಶೃತಿ ಬರೆದಿದ್ದಾರೆ. ಅದರಲ್ಲಿ

ಇವರು ಮಾಂಡವ್ಯ ಋಷಿಗಳ ಅಂಶವೆಂದು ತಿಳಿಸಿದ್ದಾರೆ.

ಹೀಗೊಂದು ಕಥೆ – ಮಾಂಡವ್ಯರು ತಮ್ಮ ಇತಿಮಿತಿ ಮೀರಿ ಭಗವಂತನನ್ನು ತಪಸ್ಸು ಮಾಡಿ ಸಾಕ್ಷಾತ್ಕಾರ ಮಾಡಿಕೊಂಡರು. (ಈ ಹಿಂದೆ ತಿಳಿಸಿದ್ದೇವೆ) ಇದು ಭಗವಂತನಿಗೆ ಬೇಕಿರಲಿಲ್ಲ. ಆದರೆ ಯಮಧರ್ಮರಾಯ ಇವರನ್ನು ಶೂಲಾರೋಹಣದಿಂದ ಯಮಪಟ್ಟಣಕ್ಕೆ ತರಲಾಯಿತು. ಈ ಶಿಕ್ಷೆಗೆ ಕಾರಣ ಏನು ಎಂದು ಹುಡುಕಲಾಗಿ, ಅವರು ತಮ್ಮ ಚಿಕ್ಕ ವಯಸ್ಸಿನಲ್ಲಿ ಸುಮಾರು ೬–೭ ವಯಸ್ಸಿನಲ್ಲಿ, ಒಂದು ಮುಳ್ಳಿನಿಂದ ನೊಣವನ್ನು ಚುಚ್ಚಿ ನೋಯಿಸಿದ್ದರಂತೆ. ಅದಕ್ಕಾಗಿ ಈ ಶಿಕ್ಷೆಯಾಯಿತು. ಅದನ್ನು ಭರಿಸಲು ಸಾಧ್ಯವಿಲ್ಲವೆಂದು ಯಮಧರ್ಮನಲ್ಲಿ ಪ್ರತಿಭಟನೆ ಮಾಡಿದ್ದರು. ೧೪ ವರುಷದ ನಂತರವೇ ಕರ್ಮಲೇಪನ ಇದು ತಪ್ಪು ಎಂದು ಯಮನ ಬಳಿ ವಾಗ್ಯುದ್ಧ ಮಾಡಿದರು. ಅದಕ್ಕೆ ಅವನನ್ನು ಶಪಿಸಿದರು. ಶೂದ್ರನಾಗೆಂದರು. ಯಮಧರ್ಮನು ಮಾಂಡವ್ಯರಿಗಿಂತ ಶ್ರೇಷ್ಠನಾದರೂ ಅವರ ತಪಃಶಕ್ತಿ ಎದುರಿಸುವಂತಿರಲಿಲ್ಲ. ಆದ್ದರಿಂದ ಶಾಪ ಸ್ವೀಕರಿಸಿದರು. ದ್ವಾಪರದಲ್ಲಿ ಕೃಷ್ಣಾವತಾರ ಕಾಲದಲ್ಲಿ ವಿದುರನಾಗಿ ಹುಟ್ಟಬೇಕಾಯಿತು. ಆಗಲೂ ಭಗವಂತನ ಸೇವೆ ಮಾಡಿದರು.

ಆದರೆ ಅಣಿಮಾ ಸಿದ್ಧಿ ಪಡೆದ ಮಾಂಡವ್ಯರಿಗೆ ಕರ್ಮ ಬಿಡಲಿಲ್ಲ. ಯಮರಾಜನಿಗೆ (ತನಗಿಂತ ಉತ್ತಮರಿಗೆ) ಶಾಪ ಕೊಟ್ಟಿದ್ದರ ಫಲದಿಂದಾಗಿ ಮೋಹನದಾಸರಾಗಿ ಅವತರಿಸಿದಾಗ ರೋಗಾದಿಪೀಡಿತರಾಗಿ ವಿಜಯದಾಸರ ಕೃಪೆಯಿಂದ ಆ ವೃಣಾದಿ ದೋಷ ಹೋಯಿತು ಎಂಬ ವಾಡಿಕೆ ಇದೆ.

ಇವರಿಗೆ ಬಹು ವರುಷಗಳ ನಂತರ ಶ್ರೀನಿವಾಸನ ವರಪ್ರಸಾದದಿಂದ ನಾಲ್ಕು ಮಕ್ಕಳೆಂದು ತಿಳಿದುಬರುತ್ತದೆ.

೧. ವೆಂಕೋಬದಾಸ

೨. ಗುರುರಾಯದಾಸ

೩. ರಾಘವೇಂದ್ರದಾಸ

೪. ಶ್ರೀನಿವಾಸದಾಸ – ಇವರೇ ಆ ನಾಲ್ಕು ಮಕ್ಕಳು.

ಮೋಹನದಾಸರು ಮೊಳಕಾಲ್ಮೂರು, (ಚಿತ್ರದುರ್ಗ ಜಿಲ್ಲೆ) ಇಲ್ಲಿ ರಾಮಚಂದ್ರಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ನಾವು ಕೂಡ ಅಲ್ಲಿಗೆ ೨೦೧೪ರಲ್ಲಿ ನೋಡಿ ಬಂದೆವು. ಅಲ್ಲೇ ನರಹರಿತೀರ್ಥರು ಮುಖ್ಯಪ್ರಾಣವನ್ನು ಸ್ಥಾಪಿಸಿದ್ದಾರೆ. ಕಂಪ್ಲಿಯಲ್ಲಿಯೂ ಕೂಡ ದಾಸರು ರಾಮಚಂದ್ರಮೂರುತಿಯನ್ನು ಪ್ರತಿಷ್ಠಾಪಿಸಿದ್ದಾರೆ. (ಬಳ್ಳಾರಿ ಜಿಲ್ಲೆ, ಹೊಸಪೇಟೆ ತಾಲ್ಲೂಕು) ಇಲ್ಲಿ ಕೂಡ ೨೦೧೬ರಲ್ಲಿ ದರ್ಶನ ಮಾಡಿ ಬಂದಿದ್ದೇವೆ. ಚಿಕ್ಕೆರಹಳ್ಳಿಯಲ್ಲಿ ಕೂಡ ಶ್ರೀರಾಮರನ್ನು ಪ್ರತಿಷ್ಠಾಪಿಸಿದ್ದಾರೆ.

ಮೋಹನದಾಸರಿಗೂ ಕೂಡ ತಮ್ಮ ಶಿಷ್ಯ ಪರಂಪರೆ ಬೆಳೆಸಬೇಕೆನ್ನಿಸಿರಬಹುದು. ಹೀಗಾಗಿ ಅವರೂ ಕೂಡ ಅನೇಕರಿಗೆ ಅಂಕಿತ ನೀಡಿ ದಾಸಕೂಟವನ್ನು ಬೆಳೆಸಿದ್ದಾರೆ ಎನ್ನಬಹುದು.

೧. ಮಧ್ವರತಿವಿಠಲರು

೨. ಗುರುಮೋಹನವಿಠಲರು

೩. ಸುಲಭವಿಠಲದಾಸರು

೪. ಸೊಬಗುವಿಠಲದಾಸರು

೫. ಚಿನ್ನವಿಠಲದಾಸರು

೬. ಪ್ರಾಣಪತಿವಿಠಲರು

ಹೀಗೆ ಕೆಲವರನ್ನು ಗುರುತಿಸಬಹುದಾಗಿದೆ. ಇವರಲ್ಲರ ಬಗ್ಗೆ ಮಾಹಿತಿ ಸಂಗ್ರಹಿಸಿದರೆ ಉತ್ತಮ ಸಂಶೋಧನೆಯಾಗಬಲ್ಲದು.

ಜಾತಸ್ಯ ಮರಣಂ ಧೃವಂ ಎಂಬಂತೆ ಸಾವು ನಿಶ್ಚಿತವಾದ್ದರಿಂದ ಇವರೂ ಕೂಡ ಸುಮಾರು ೮೪–೮೫ ವರುಷ ಚಿಕಲಪಟ್ಟಿಯಲ್ಲಿ ವಿಜಯದಾಸರ ಕಟ್ಟೆ ಪೂಜೆ ಮಾಡಿಕೊಂಡು ೬೦ ವರುಷ ಇದ್ದರೆಂದು ಬಲ್ಲವರ ಮಾಹಿತಿ. ವರದೇಂದ್ರ ಸಾಹಿತ್ಯ ಮಾಡಲಿಯಿಂದ ಪ್ರಕಟಿತ ಗ್ರಂಥದ ಆಧಾರದ ಮೇಲೆ ಅಂಗೀರಸ

ಸಂವತ್ಸರ ಜೇಷ್ಠ ಶುದ್ಧ ಷಷ್ಠಿ – ೧೮೧೨ ರಲ್ಲಿ ದೈವಾಧೀನರಾಗಿದ್ದಾರೆಂದು ತಿಳಿದುಬರುತ್ತದೆ.

ಇನ್ನು ಇವರ ಸಾಹಿತ್ಯವನ್ನು ಇಣಿಕಿ ನೋಡಿದರೆ ದೇವತಾಸ್ತೋತ್ರ, ಗುರುಸ್ತೋತ್ರ, ಉರುಟಣೆ ಪದ, ಕೋಲುಹಾಡು, ಉಗಾಭೋಗ, ಸುಳಾದಿ ಇತ್ಯಾದಿ ಕೃತಿಗಳನ್ನು ರಚಿಸಿದ್ದಾರೆ. ರುದ್ರ ದೇವರ ಕೃತಿ, ಭಾರತಿದೇವಿ, ಪ್ರಾಣದೇವರು, ಲಕ್ಷ್ಮಿದೇವಿ, ಭಗವಂತ ಹೀಗೆ ತಾರತಮ್ಯದಲ್ಲಿ ರಚಿಸಿದ ಕೃತಿಗಳು ಲಭ್ಯವಿದೆ. ೬೦ ನುಡಿಯ ಉರುಟಣೆ ಪದವು

ಜಯ ಜಯ ರಾಜ ಜಯ
ಜಯ ಜಯ ನಮ್ಮ ಜಾನಕೀರಮಣನೇ ॥ ಎಂದು

ಸೀತಾರಾಮರನ್ನು ಸ್ತುತಿಸಿದ್ದಾರೆ.

ಹರಿಯೆ ಸರ್ವೋತ್ತಮ ಸಿರಿಯು ಆತನರಾಣಿ
ಸರಸಿಜೋದ್ಭವ ಮಾರುತ ಪುತ್ರರೈಯಾ ಎಂಬ

ಸ್ತುತಿಯೊಂದಿಗೆ ಸುಳಾದಿ ರಚಿಸಿದ್ದಾರೆ.

ಎರಡು ಉಗಾಭೋಗ :– ಉಡುಪಿಯ ಕೃಷ್ಣನೇ ಸಡಗರ ನಿನಗ್ಯಾಕೆ

ಬಡವನಾದವನ ಭವ ಮಡುವಿನೊಳಗೊ ನೂಕಿ
ಮಿಡಕಿಸಿ ಕೊಂಬುವುದುಥರವೇನು ಹರಿಯೆ?
ಒಡಲಿಗೋಸುಗ ನಿನ್ನ ಬೇಡಿ ಬಂದವನಲ್ಲ
ದೃಢಭಕ್ತಿ ಜ್ಞಾನಕೊಟ್ಟು ರಕ್ಷಿಸು ಹರಿಯೆ
ಕಡಲಶಯನ ನಮ್ಮ ಮೋಹನ್ನವಿಠಲ
ಆಡದುದಧಿಯ ದಾಟಿಸಿ ಕಡೆಗಾಣಿಸು ಸುಲಭದಿಂದ

ಮಧ್ವರಾಯರ ಭಾಗ್ಯ ಎಂಥದೋ ವರ್ಣಿಸಲು
ಶುದ್ಧ ಸತ್ವಾತ್ಮಕವಾದ ಶರೀರವು
ಅದ್ವೈತ ಮತವೆಂಬೊ ಅರಣ್ಯವಾಪೊಕ್ಕು

ನಿಧ್ವಂಸ ಮಾಡಿ ವಾದಿಗಳನೆ ಗೆದ್ದು
ಪದ್ಧತಿ ತಪ್ಪದಂತೆ ಮತವನ್ನುದ್ಧರಿಸಿ
ವೃದ್ಧಿಗೈಸಿದರು ಸರ್ವಸಜ್ಜನರನ್ನು
ಸಿದ್ಧರಾಮವೆಂದು ಗೀರ್ವಾಣರೆಲ್ಲರು
ಎದ್ದೆದ್ದು ಕುಣಿದರು ಕರವ ಹೊಡೆದು
ಮೋಹನ್ನವಿಠಲನೆ ಸಾಕ್ಷಿ ಇದಕೆ ಎಂದರು.

*******************

ಕೋಲುಹಾಡು ದೀರ್ಘಕೃತಿ

ಆಕಾಶಭಿಮಾನಿ ಶ್ರೀಕಂಠ ವರಪುತ್ರ
ಏಕದಂತನೆ ವಿಘ್ನೇಶ ಕೋಲೆ ಎಂದು ಪ್ರಾರಂಭ ಮಾಡಿ ಮಹಾಭಾರತದ ಕಥೆಯನ್ನು ಇಲ್ಲಿ ಹೆಣೆದಿದ್ದಾರೆ.

ಪನ್ನಂಗಶಯನ ಸುಪರ್ಣ ಗಿರೀಶ
ಸುಪರ್ಣ ವಾಹನ್ನ ಸುಖಪೂರ್ಣಕೋಲೆ
ಸುಪರ್ಣವಾಹನ್ನ ಸುಖಪೂರ್ಣನಾದ
ಮೋಹನ್ನವಿಠಲ ಕರುಣಿಸು ಕೋಲೆ ...... ಎಂದು ೨೧೭ ನುಡಿಯ ದೀರ್ಘ ಖಂಡಕಾವ್ಯ ರಚಿಸಿದ್ದಾರೆ.

ಮೋಹನ್ನದಾಸರ ಪ್ರಿಯಶಿಷ್ಯ ಶ್ರೀ ಲಕ್ಷ್ಮಣದಾಸರು ಈ ಕೃತಿಗೆ ಫಲಶೃತಿ ಬರೆದಿದ್ದಾರೆ. ಅದರಲ್ಲಿ

ಮೋಹನದಾಸರು ಮಾಂಡವ್ಯರೆಂಬೋರು
ಶ್ರೀ ಹನುಮನ್ನ ಬಲುದೋರಿ ಕೋಲೆ
ಶ್ರೀ ಹನುಮನ್ನ ಒಲುಮೆಯಿಂದೀ ಕೃತಿ
ಶ್ರೀಹರಿಚರಣಕ್ಕರ್ಪಿಸಿದರು ಕೋಲೆ ....... ಎನ್ನುವಲ್ಲಿ ಅದರ ಅಂಶ ತಿಳಿಸಿ ೯ ನುಡಿಯಿಂದ ಈ ಕೃತಿ ಸಂಪೂರ್ಣವಾಗಿದೆ.

ನನ್ನ ಆಧ್ಯಾತ್ಮಿಕ ಗುರುಗಳಾದ ಶ್ರೀಯುತ ಪಿ.ಎಸ್.ವಾಯಿಕರ್‌ರವರು ಮೋಹನದಾಸರ ಒಂದು ಚಿಂತನ ಲೇಖನವನ್ನು ಬರೆದು ಕೊಡಿ ನೋಡುವ ಎಂದರು. ಅದಕ್ಕಾಗಿ ಇದನ್ನು ಬರೆದು ಅವರ ಅಂತರ್ಯಾಮಿ, ದಾಸರ ಅಂತರ್ಯಾಮಿ, ಹರಿತ್ಸ ಮಾಂಡವ್ಯ ಋಷಿಗಳಂತರ್ಯಾಮಿ, ಶ್ರೀವಾದಿರಾಜರ ಅಂತರ್ಯಾಮಿ, ಶ್ರೀ ಮೋಹನವಿಠಲ ಪ್ರೀತನಾಗಲಿ.

ಶ್ರೀ ಕೃಷ್ಣಾರ್ಪಣಮಸ್ತು
ಶ್ರೀವಾದಿರಾಜಾರ್ಪಣಮಸ್ತು

**********************************